**ಪಾಠ–11** **ಜೂನ್ 4–10**

# ಕನಸುಗಳ ನಿಪುಣ ಯೋಸೇಫನು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಆದಿಕಾಂಡ 37: ಮತ್ತಯ 20:26,27: ಅಪೋಸ್ತಲರ ಕೃತ್ಯಗಳು 7:9; ಆದಿಕಾಂಡ 38,39; ಆದಿ 40:1–40:36

**ಸ್ಮರಣ ವಾಕ್ಯ : "ಅವರು ಒಬ್ಬರಿಗೊಬ್ಬರು ಹೀಗೆ ಮಾತಾಡಿದರು, 'ಅಗೋ, ಆ ಕನಸಿನವನು ಬರುತ್ತಾನೆ !'" (ಆದಿಕಾಂಡ 37:19)**

ಯೋಸೆಫನ ಚರಿತ್ರೆಯು (ಆದಿಕಾಂಡ 37–50) ಆದಿಕಾಂಡ ಪುಸ್ತಕದ ಕೊನೆಯ ಭಾಗವು ಆತನು ಕಾನಾನಿನಲ್ಲಿ ಮೊದಲು ಕನಸು (ಆದಿ 37:1–11) ಕಂಡಂದಿನಿಂದ ಆತನು ಐಗುಪ್ತದಲ್ಲಿ ಸಾವಿನ ತನಕ (ಆದಿಕಾಂಡ 50:26) ಮುಂದುವರೆಯುತ್ತದೆ. ಇನ್ನಾವ ಮೂಲಪಿತೃವಿನ ಬಗ್ಗೆ ಬರೆದಿರುವಷ್ಟು ಯೋಸೇಫನ ಚರಿತ್ರೆಯ ಭಾಗವು ಆದಿಕಾಂಡ ಪುಸ್ತಕದಲ್ಲಿ ಸುಧೀರ್ಘವಾಗಿದೆ. ಯೋಸೇಫನು ಯಾಕೋಬನ ಪುತ್ರನಾಗಿದ್ದರೂ, ಅಬ್ರಾಹಾಮ, ಇಸಾಕ, ಯಾಕೋಬರ ಹಾಗೆ ಆದಿಕಾಂಡ ಪುಸ್ತಕದಲ್ಲಿ ಓರ್ವ ಮಹಪಿತೃವಿನ ಹಾಗೆಯೇ ಬಿಂಬಿಸಲ್ಪಟ್ಟವನು.

ಯೋಸೆಫನ ಚರಿತ್ರೆಯು, ಎರಡು ಮಹಾತಾತ್ವಿಕ ಸತ್ಯಗಳನ್ನು ಎತ್ತಿತೋರಿಸುತ್ತದೆ. ಮೊದಲನೆಯದು, ದೇವರು ತನ್ನ ವಾಗ್ದಾನಗಳನ್ನು ನೆರವೇರಿಸುವನು; ಎರಡನೆಯದು, ದೇವರು ಕೆಟ್ಟದ್ದನ್ನು ಒಳ್ಳೆಯದಕ್ಕೆ ತಿರುಗಿಸಬಲ್ಲನು.

ಈ ವಾರದ ಕಲಿಕೆಯಲ್ಲಿ, ಯೋಸೆಫನ ಚರಿತ್ರೆಯ ಆದಿ ಭಾಗವನ್ನು

* ಈ ವಾರದ ಪಾಠವನ್ನು ಜೂನ್ 11ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಕೇಂದ್ರಿಕರಿಸುತ್ತವೆ. ಆತನು ಯಾಕೋಬನ ಪ್ರಿಯ ಪುತ್ರನು, ಆದರೆ 'ಬಾಲ್ ಹಕಲೊಮೊಟ್', 'ಕನಸುಗಾರ' (ಆದಿ 37:19) ಎಂಬ ಅಡ್ಡಹೆಸರನ್ನು ಹೋದಿದ್ದನು. ಅದರ ಮೂಲಪದ 'ಕನಸುಗಳ ಗುರು' ಅಂದರೆ 'ಕನಸುಗಳ ನಿಪುಣ' ಎಂಬುದನ್ನು ಸೂಚಿಸುತ್ತದೆ. ಈ ಪದನಾಮ ಆತನಿಗೆ ಸರಿಹೊಂದುತ್ತದೆ ಯಾಕೆಂದರೆ, ಆತನು ಪ್ರವಾದನ ಕನಸು ಹೊಂದಿ, ಅರ್ಥ ಮಾಡಿಕೊಂಡು, ಅವನ್ನು ವಿವರಿಸುವುದು ಮಾತ್ರವಲ್ಲದೆ, ಆತನ ಜೀವನದಲ್ಲಿ ಅವುಗಳು ನೆರವೇರುತ್ತವೆ.

ಈ ಅಧ್ಯಾಯದಲ್ಲಿ, ಮತ್ತೊಮ್ಮೆ, ಮಾನವ ಹೃದಯದ ದುಷ್ಟತನ ಮತ್ತು ಪಾತಕತೆಯ ಹೊರತಾಗಿಯೂ ದೈವೀಕ ಅಧಿಕಾರ ಉದ್ದೇಶಗಳು ಸ್ಥಿರವಾಗಿರುತ್ತದೆ.

**ಭಾನುವಾರ** **ಜೂನ್ 5**

## ಕೌಟುಂಬಿಕ ತೊಂದರೆಗಳು

ಯಾಕೋಬನು ಅಂತಿಮವಾಗಿ, ದೇಶದಲ್ಲಿ ನೆಲೆಗೊಂಡನು. ಇಸಾಕನು ಕೇವಲ ಪ್ರವಾಸಿಯಾಗಿದ್ದನು, ಆದರೆ ಯಕೋಬನು "ದೇಶದಲ್ಲಿ ನೆಲೆಸಿದ್ದನು" (ಆದಿ 37:1) ಆತನು, ನೆಲೆಗೊಳ್ಳಿತ್ತಿರುವಾಗ, ತೊಂದರೆಗಳು ಶುರುವಾದವು ಈ ಬಾರಿ ಮನೆತನದ ಒಳಗೆಯೇ. ಈ ಸಂಘರ್ಷವು ಒಂದು ಭೂಮಿಯನ್ನು ಪಡೆಯುವ ಅಥವಾ ಯಾವುದೋ ಬಾವಿಯ ಬಳಕೆಯ ವಿಷಯವಲ್ಲ; ಆದ್ರೆ ಅದು, ಪ್ರಧಾನವಾಗಿ ಆತ್ಮೀಕದ್ದಾಗಿದೆ.

ಆದಿಕಾಂಡ 37:1–11ನ್ನು ಓದಿರಿ. ಯೋಸೇಫನನ್ನು ಅವನ ಸಹೋದರರು ಅಷ್ಟು ದ್ವೇಷಿಸುವುದರ ಹಿಂದೆ ಯಾವ ಕೌಟುಂಬಿಕ ಕ್ರಿಯಾತ್ಮಕ ಮನೋಭಾವವು ಅನುಕೂಲಿಸಿತು?

ಯಾಕೋಬನ ಮುಪ್ಪಿನ ಕಾಲದಲ್ಲಿ (ಆದಿ 37:3) ಜನಿಸಿದ ಯೋಸೇಫನು ತನ್ನ ತಂದೆಯೊಂದಿಗೆ ವಿಶೇಷ ಸಂಬಂಧ ಅನುಭವಿಸಿದನು; ಅವನ ತಂದೆಯು "ಅವನನ್ನು ಬೇರೆಲ್ಲಾ ಮಕ್ಕಳೀಗಿಂತ ಹೆಚ್ಚು ಪ್ರೀತಿಸಿದನು: (ಆದಿ 37:4) ಎಂಬುದನ್ನು ನಾವು ತಿಳಿಯುವೆವು. ಯೋಸೇಫನಿಗೆ "ಬಹು ವರ್ಣಗಳುಲ್ಲ ಒಂದು ಅಂಗಿ" (ಆದಿಕಾಂಡ 37:3) ರಾಜಪುತ್ರರ ನಿಲುವಂಗಿಯಂತೆ (2 ಸಮು 13:18) ಮಾಡಿಸಿದುದು, ರಾಹೇಳಲ ಮೊದಲ ಮಗನಾದ ಯೋಸೆಫನನ್ನು ಚೊಚ್ಚಲ ಸ್ಥಾನದಲ್ಲಿ ಇರಿಸಲು ಯಾಕೋಬನ ಗುಪ್ತ ಬಯಕೆಯಾಗಿತ್ತು.

ಭವಿಷ್ಯದಲ್ಲಿ, ನಿಜವಾಗಿಯೂ, ಯಾಕೋಬನ ಬಯಕೆ ನೆರವೇರುವಿದನ್ನು ನೋಡುವೆವು; ಯೋಸೆಫನು ಚೊಚ್ಚಲ ಮಗನ ಭಾದ್ಯತೆಯನ್ನು ಪಡೆಯುವನು (1 ಪೂರ್ವಕಾಲ 5:2), ಹಾಗೆಂದು, ಯೋಸೇಫನ ಸಹೋದರರು ಅಷ್ಟಾಗಿ ದ್ವೇಷಿಸಿ, "ಆತನೋದಿಗೆ ಸ್ನೆಹಭಾವದೊಂದಿಗೆ ಮಾತಾಡಲಾರದೆ" ಇದ್ದದ್ದು ಆಶ್ಚರ್ಯವೇನಲ್ಲ (ಆದಿ 37:4)

ಹೆಚ್ಚಾಗಿ, ಯೋಸೆಫನು ತನ್ನ ಸಹೋದರರು ಮಾಡುವ ಕೆಟ್ಟಕೆಲಸಗಳ ಕುರಿತು ತನ್ನ ತಂದೆಗೆ ತಿಳಿಸುತಿದ್ದನು (ಆದಿ 37:2). ತಮ್ಮ ಬಗ್ಗೆ ವರದಿಮಾಡುವರನ್ನು ಯಾರೂ ಇಷ್ಟಪಡರು.

ಹಾಗಾಗಿ, ಯೋಸೇಫನು ತಾನು ಕಂಡ ಕನಸಿನಂತೆ, ತನ್ನನ್ನು ದೇವರು ಸಹೋದರರಿಗಿಂತ ಉನ್ನತ ಸ್ಥಾನದಲ್ಲಿ ಇರಿಸುವನು; ಮತ್ತು ಅವರು ತನಗೆ ಅಡ್ಡಬೀಳುವರು ಎಂದು ತಿಳಿಸಿದಾಗ, ಅವರು ಇವನನ್ನು ಇನ್ನೂ ಹೆಚ್ಚಾಗಿ ದ್ವೇಷಿಸಿದರು. ಆ ಕನಸು ಪ್ರವಾದನೆ ಸ್ವರೂಪದ್ದಾಗಿತ್ತು ಎಂಬುದು ಸ್ಥಿರವಾಗುವುದಕ್ಕೆ ಎರಡನೆಯ ಬಾರಿ ತೋರಿಸಲಾಯಿತು (ಆದಿ 41:32). ಯಾಕೋಬನು ತನ್ನ ಮಗನನ್ನು ಬಹಿರಂಗವಾಗಿ ಗದರಿಸಿದರೂ (ಆದಿ 37:10), ಈ ವಿಷಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ಅದರ ಅರ್ಥದ ಬಗ್ಗೆ ಆಲೋಚಿಸುತ್ತಾ, ಅದು ನೆರವೇರಬೇಕೆಂದು ಕಾದಿದ್ದನು (ಆದಿ 37:11). ಇದರಲ್ಲಿ ಬಹುಶಃ ಈ ಕನಸುಗಳಿಗೆ ಏನೋ ವಿಶಿಷ್ಟತೆ ಇದೆ ಎಂದು ಆಗ ತಿಳಿದಿದ್ದುದು ಗೋಚರಿಸುತ್ತದೆ. ಆ ಸಂದರ್ಭದಲ್ಲಿ ಇವು ಆತನಿಗೆ ತಿಳಿಯದಿದ್ದರೂ, ಆತನ ಯೋಚನೆ ಸರಿಯಾಗಿತ್ತು.

ಮತ್ತಾಯ 20:26,27ನ್ನು ಓದಿರಿ. ಇಲ್ಲಿ ಪ್ರಕಟಿಸಲಾದ ಬಹಳ ಪ್ರಮುಖ ಸೂತ್ರ ಏನು ಮತ್ತು ಅದು ಬೋಧಿಸುವುದನ್ನು ನಾವು ನಮ್ಮ ಜೀವನದಲ್ಲಿ ವ್ಯಕ್ತಗೊಳಿಸಲು ಹೇಗೆ ಕಲಿಯಬಹುದು?

**ಸೋಮವಾರ** **ಜೂನ್ 6**

## ಯೋಸೇಫನ ಮೇಲೆ ದಾಳಿ

ನಂತರದ ಘಟನೆಗಳು ಎಷ್ಟು ಭಯಾನಕವಾಗಿದ್ದರು, ಅವುಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವೇನಲ್ಲ. ನಿಮ್ಮನ್ನು ದ್ವೇಷಿಸುವ ಒಬ್ಬರೊಟ್ಟಿಗಿರುವುದು,

ಮತ್ತು ಅವರೂ ಸಂಬಂಧಿಗಳಾಗಿದ್ದರೆ, ಈಗಲೋ ಮುಂದೆಂದೋ ತಪ್ಪಿಸಿಕೊಳ್ಳಲಾಗದ ತೊಂದರೆಗೆ ನಡೆಸುವುದು ಮತ್ತು ಹಾಗೆಯೇ ಆಯಿತು.

ಆದಿಕಾಂಡ 37:12–36ನ್ನು ಓದಿರಿ. ಪರಿವರ್ತನೆಯಾಗದ ಹೃದಯಗಳು ಹೇಗೆ ಅಪಾಯಕಾರಿಯೂ ದುಷ್ಟವೂ ಆಗಿರುತ್ತದೆಂದು ಮತ್ತು ಅದು ನಮ್ಮನ್ನು ಎಂತಹ ಕೃತ್ಯಗಳಿಗೆ ನಡಿಸಬಹುದು ಎಂಬುದನ್ನು ಇದು ಹೇಗೆ ನಮಗೆ ತಿಳಿಸುತ್ತದೆ?

ದೇವರ ದಯೆಯು ಯೋಸೇಫನ ಮೇಲೆ ಇದ್ದದ್ದರಿಂದ (ಅ.ಕೃ. 7:9). ಆತನ ಅಣ್ಣಂದಿರು ಹೊಟ್ಟೆಕಿಚ್ಚು ಪಟ್ಟರು; ದೇವರ ದಯೆ ಇದ್ದದ್ದು ಮುಂದಿನ ಪ್ರತಿ ಹೆಜ್ಜೆಯಲ್ಲೂ ಕಾಣಬಹುದು. ಯೋಸೇಫನು ಅಡವಿಯಲ್ಲಿ ದಾರಿತಪ್ಪಲು ಓರ್ವ ಪುರುಷನು ಕಂಡು ಅವನಿಗೆ ಮಾರ್ಗ ತೋರಿದನು (ಆದಿ 37:15). ಯೋಸೇಫನನ್ನು ಸಹೋದರರು ಕೊಲ್ಲಬೇಕೆಂದಿದ್ದಾಗ, ರೂಬೇನನು ತಡೆದು, ಅವನನ್ನು ಗುಂಡಿಯಲ್ಲಿ ಹಾಕಲು ಹೇಳಿದನು (ಆದಿ 37:20–22).

ತನ್ನ ಸ್ವಂತ ಮನೆಯವರಿಂದಲೇ ವ್ಯಕ್ತಗೊಳ್ಳುವ ಈ ಪರಿಯ ದ್ವೇಷವನ್ನು ಕಲ್ಪಿಸಿಕೊಳ್ಳುವುದು ತುಸು ಕಷ್ಟವೇ. ಈ ಬಗೆಯ ಪಾತಕತನವನ್ನು ಮಾಡಲು ಆ ಯುವಕರಿಗೆ ಹೇಗೆ ಸಾಧ್ಯವಾದೀತು? ಇದರಿಂದ ತಮ್ಮ ತಂದೆಗೆ ಏನಾಗಬಹುದೆಂದು, ಸ್ವಲ್ಪವಾದರೂ, ಚಿಂತಿಸಲಿಲ್ಲವೇ? ತಮ್ಮ ತಂದೆಯು ಯೋಸೇಫನನ್ನು ಹೆಚ್ಚು ಪ್ರೀತಿಮಾಡಿದ ಕಾರಣ ಆತನ ಮೇಲೆ ಯಾವುದೇ ಅಸಮಾಧಾನವಿದ್ದರೂ ಇಂತಹದ್ದನ್ನು ಅವನೊಬ್ಬನ ಮಗನಿಗೆ ಹೀಗೆ ಮಾಡುವುದು ಹೀನವೇ. ಮನುಷ್ಯರು ಎಷ್ಟು ದುಷ್ಟರಾಗಿರಬಹುದು ಎಂಬುದಕ್ಕೆ ಎಂತಹ ಬಲವಾದ ಸಾಕ್ಷಿ.

(ಆತನನ್ನು ಗುಂಡಿಗೆ ಹಾಕಿ ಊಟಕ್ಕೆ ಕೂತ ನಂತರ) "ಅವರಲ್ಲಿ (ಸಹೋದರಲ್ಲಿ) ಕೆಲವರು ಇಂತಹ ಸಮಾಧಾನದ ಬಗ್ಗೆ ರೇಗಿದರು; ಸೇಡು ತೀರಿಸಿಕೊಳ್ಳುವುದರಿಂದ ಹೊಂದ ಬಯಸಿದ್ದಷ್ಟು ಸಮಾಧಾನವನ್ನು ಅವರು ಕಂಡುಕೊಳ್ಳಲಿಲ್ಲ. ತಕ್ಷಣ ಒಂದು ಪ್ರಯಾಣಿಕರ ಗುಂಪು ಹತ್ತಿರ ಬರುತ್ತಿರುವುದು ಕಾಣಿಸುತ್ತದೆ. ಅದು ಯೋರ್ದಾನಿನ ಆಚೆಯಿಂದ ಬಂದು ತಮ್ಮ ಒಂಟೆಗಳ ಮೇಲೆ ಹಾಲುಮಡ್ಡಿ, ಸುಗಂಧತೈಲ ಮತ್ತಿತರ ಪದಾರ್ಥಗಳನ್ನು ಹೇರಿಕೊಂಡು ಐಗುಪ್ತದೆಡೆಗೆ ಹೋಗುತ್ತಿದ್ದ ಇಷ್ಮಾಯೇಲರ ಗುಂಪು. ಆಗ ಯೆಹೂದನು ತಮ್ಮ ತಮ್ಮನನ್ನು ಸಾಯುವುದಕ್ಕೆ ಬಿಡುವ ಬದಲು ಈ ಅನ್ಯಜನಾಂಗದ ವ್ಯಾಪಾರಸ್ಥರಿಗೆ ಮಾರಿಬಿಡುವ ಸಲಹೆ

ಕೊಟ್ಟನು. ಹೀಗೆ ಅವನು (ಯೋಸೇಫನು) ತಮ್ಮ ಮಧ್ಯದಿಂದ ತೆಗೆದುಹಾಕಲ್ಪಟ್ಟರೂ, ಅವನನ್ನು ಕೊಂದ ರಕ್ತಾಪರಾಧವು ಅವರ ಮೇಲಿರುವುದಿಲ್ಲ" ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 279.

ಅವನನ್ನು ಕೊಲ್ಲಬೇಕೆಂದು ಗುಂಡಿಯಲ್ಲಿ ಹಾಕಿದ್ದರೂ, ಯೆಹೂದ್ಯನು, ಆ ಒಂಟೆಯ ಮೇಲಿನ ಪ್ರಯಾಣಿಕರಿಗೆ ಮಾರುವ ಬಗ್ಗೆ ಸಹೋದರರಿಗೆ ಹೇಳುವನು (ಆದಿ 37:26,27). ಮಿದ್ಯಾನರಿಗೆ ಮಾರಲ್ಪಟ್ಟ ಯೋಸೇಫನನ್ನು ಅವರು ಐಗುಪ್ತದಲ್ಲಿ ಇನ್ನೊಬ್ಬನಿಗೆ ಮಾರಿಬಿಡುತ್ತಾರೆ (ಆದಿ 37:28,36). ಮುಂದೆ ಆತನಿಗೆ ಒಳ್ಳೆಯದಾಯಿತು.

ನಮ್ಮ ಸ್ವಭಾವದ ವಿಶಿಷ್ಟ ಲಕ್ಷಣಗಳು, ನಮ್ಮಲ್ಲಿ ನಾವು ಮಾಡಬಹುದೆಂದು ನೆನೆಸದಿರುವ ಕೃತ್ಯವನ್ನು, ಜೀವನದ ಯಾವುದೋ ಒಂದು ಘಟ್ಟದಲ್ಲಿ ಮಾಡಿಬಿಡುವುದರಲ್ಲಿ ತೋರಿಬರುವ ಮುನ್ನವೇ, ಅವುಗಳನ್ನು ಬದಲು ಮಾಡುವಂತೆ ದೇವರ ಬಲವನ್ನು ಬೇಡಿಕೊಳ್ಳುವುದು ಎಷ್ಟು ಪ್ರಮುಖವಾದದ್ದು?

**ಮಂಗಳವಾರ** **ಜೂನ್ 7**

## ಯೆಹೂದ್ಯನು ಮತ್ತು ತಾಮರಗಳು

ಇಲ್ಲಿ ತಾಮರಳ ವಿಷಯವು ಅಪಥ್ಯವೇನಲ್ಲ. ಯೋಸೇಫನನ್ನು ಐಗುಪ್ತದಲ್ಲಿ ಮಾರಿಬಿಟ್ಟ ನಂತರ (ಆದಿಕಾಂಡ 38:1) ಕಾಲಕ್ರಮಾನುಸಾರ ಈ ಘಟನೆ ನಡೆಯುತ್ತದೆ. ಮತ್ತು ಇದಕ್ಕೆ ಇಂಬುಕೊಡುವ ಹಾಗೆ, ಯೆಹೂದ್ಯನು ತನ್ನ ಸಹೋದರರನ್ನು ಬಿಟ್ಟುಹೋದದ್ದು, ಅವನಿಗೆ ತನ್ನ ಸಹೋದರರೊಂದಿಗೆ ಒಮ್ಮತವಿರಲಿಲ್ಲ ಎಂಬುದು ತಿಳಿಯಬಹುದಾಗಿದೆ ಮತ್ತು ಈ ಅಧ್ಯಾಯವು ಹಿಂದಿನ ಅಧ್ಯಾಯದಂತೆ ಬಹಳಷ್ಟು ಬಾರಿ ಅದೇ ಬಗೆಯ ಪದಗಳು ಮತ್ತು ಅಂತರ್ಭಾವಗಳನ್ನು ಒಳಗೊಂಡಿರುವುದರಿಂದ, ಅದೇ ರೀತಿಯ ತತ್ವಪಾಠಗಳನ್ನು ಹೊದ್ದುಕೊಂಡಿದೆ; ಒಂದು ದುಷ್ಟಕಾರ್ಯವನ್ನು ರಕ್ಷಣೆಗೆ ಹೊಂದಿಕೊಂಡ ಒಂದು ಸ್ಪಷ್ಟವಾದ ಘಟನೆಗೆ ತಿರುಗಿಸಲ್ಪಡುವುದು.

ಆದಿಕಾಂಡ 38ನ್ನು ಓದಿರಿ. ಯೆಹೂದ್ಯನ ನಡತೆಯನ್ನು ಕಾನಾನ್ಯಳಾದ ತಾಮರಳೊಂದಿಗೆ ಹೋಲಿಸಿರಿ. ಈ ಈರ್ವರಲ್ಲಿ, ಯಾರು ಹೆಚ್ಚು ನೀತಿವಂತರು, ಮತ್ತು ಯಾಕೆ?

ಯೆಹೂದ್ಯನು ಓರ್ವ ಕಾನಾನ್ಯ ಸ್ತ್ರೀಯನ್ನು ಮದುವೆ ಮಾಡಿಕೊಂಡು ಆಕೆಯಿಂದ ಏರ, ಓನಾನ ಮತ್ತು ಶೇಲಹ ಎಂಬ ಮೂವರು ಗಂಡುಮಕ್ಕಳನ್ನು ಪಡೆದನು. ಯೆಹೂದ್ಯನು ಚೊಚ್ಚಲ ಮಗ ಏರನಿಗೆ ತಾಮರಳನ್ನು ಹೆಂಡತಿಯಾಗಿ ಕೊಟ್ಟು ತನ್ನ ವಂಶವು ಮುಂದುವರಿಯಲು ಅನುವು ಮಾಡುತ್ತಾನೆ. ಆದರೆ ಅವರ ದುಷ್ಟತನದ ನಿಮಿತ್ತ ದೇವರು ಏರನನ್ನು ಮತ್ತು ಓನಾನನ್ನು ಕೊಂದದ್ದರಿಂದ, ಯೆಹೂದ್ಯನು ಅವಳಿಗೆ ತನ್ನ ಕೊನೆಯ ಮಗ ಶೇಲಹನನ್ನು ಮದುವೆ ಮಾಡುವ ಮಾತುಕೊಡುತ್ತಾನೆ.

ಸ್ವಲ್ಪ ಸಮಯದ ನಂತರ, ಯೆಹೂದನು ತಾನು ಕೊಟ್ಟ ಮಾತನ್ನು ಮರೆತು, ತನ್ನ ಹೆಂಡತಿಯ ಅಗಲಿಕೆಯ ನೋವನ್ನು ಮರೆಯಲು ಪ್ರಯತ್ನಿಸುತ್ತಿರುವಾಗ, ತಾಮರಳು ತನಗೆ ಆತನು ಕೊಟ್ಟ ಮಾತನ್ನು ಒತ್ತಾಯಪೂರ್ವಕವಾಗಿ ನೆರವೇರಿಸಿಕೊಳ್ಳಲು ಓರ್ವ ವೇಶ್ಯೆಯ ಹಾಗೆ ನಡೆದಳು. ವೇಶ್ಯೆಗೆ ತೆರಬೇಕಾದ ಹಣವಿಲ್ಲದಿರಲು, ಆಕೆಯ ಗುರುತು ತಿಳಿಯದ ಯೆಹೂದನು, ತನ್ನ ಮಂದೆಯಿಂದ ಒಂದು ಆಡನ್ನು ಕಳುಹಿಸಿಕೊಡಲು ಒಪ್ಪುವನು.

ತಾನು ಕೊಡಬೇಕಾದ ಮಾತಿಗೆ ಖಾತರಿಯಾಗಿ ತನ್ನ ಮುದ್ರೆ, ದಾರ ಮತ್ತು ಕೈಕೋಲನ್ನು ಒತ್ತೆ ಇಡಲು ಕೇಳುವಳು. ಇಂತಹ ಭೇಟಿಯಿಂದ ತಾಮರಳು ಗರ್ಭಿಣಿಯಾದಳು. ಯೆಹೂದನು ಆಕೆಯು ಗರ್ಭಧರಿಸಿರುವುದರಿಂದ ವೇಶ್ಯೆಯಾಗಿದ್ದಾಳೆ ಎಂದು ಆಪಾದಿಸಿದಾಗ, ಅವನಿಗೆ ಆತನ, ಮುದ್ರೆ, ದಾರ ಮತ್ತು ಕೈಕೋಲನ್ನು ತೋರಿಸುವಳು. ಯೆಹೂದನಿಗೆ ತನ್ನ ತಪ್ಪು ಅರಿವಾಗಿ ಕ್ಷಮೆ ಬೇಡುವನು.

ಈ ನೀಚಕಥೆಯ ಅಂತ್ಯದಲ್ಲಿ 'ಪೆರೆಚ್' ಅಂದರೆ 'ಭೇದಿಸಿಕೊಂಡು ಬಂದದ್ದು' ಎಂಬರ್ಥದ ಹೆಸರಿನ ಮಗನು ಹುಟ್ಟಿದನು. ಇವನು ಯಾಕೋಬನ ಹಾಗೆಯೇ ಎರಡನೆಯವನಾಗಿ ಹುಟ್ಟಿದರೂ, ಮೊದಲಿನವನಾದನು ಮತ್ತು ದಾವೀದನ ಪೂರ್ವಜನೆಂದು ರಕ್ಷಣೆಯ ಚರಿತ್ರೆಯಲ್ಲಿ ಹೆಸರಿಸಿದೆ (ರೂತಳು 4:18–22), ಮತ್ತು ಯೇಸುಕ್ರಿಸ್ತನ ವಂಶಾವಳಿಯಲ್ಲಿದೆ (ಮತ್ತಾಯ 1:3). ತಾಮರಳು ನಾಲ್ಕು ಸ್ತ್ರೀಯರಲ್ಲಿ ಮೊದಲಿಗಳಾದಳು– ರಾಹಾಬಳು (ಮತ್ತಾಯ 1:5), ರೂತಳು (ಮತ್ತಾಯ 1:5,6) ಮತ್ತು ಊರೀಯನ ಹೆಂಡತಿ (ಮತ್ತಾಯ 1:6) ಎಂಬುವರು ಆಕೆಯ

ನಂತರ ಕ್ರಮಾನುಸಾರ ಕ್ರಿಸ್ತನ ತಾಯಿಯಾದ ಮರಿಯಳ ಪೂರ್ವದಲ್ಲಿ ಕಾಣಬರುತ್ತಾರೆ.

ಈ ಕಥೆಯಿಂದ ಒಂದು ಪಾಠವನ್ನು ನಾವು ಹೊಂದುವೆವು; ಹೇಗೆ ತಾಮರಳನ್ನು ದೇವರು ತನ್ನ ಕೃಪೆಯಿಂದ ಕೆಟ್ಟದ್ದನ್ನು ಒಳ್ಳೆಯದಕ್ಕೆ ತಿರುಗಿಸಿದ ಹಾಗೆಯೇ, ನಮ್ಮನ್ನೂ ಸಹ ಯೇಸುವಿನ ಶಿಲುಬೆಯ ಮೂಲಕ ರಕ್ಷಿಸುವನು ಮತ್ತು ಯೋಸೇಫನ ವಿಷಯದಲ್ಲಿ ಬಂದ ತೊಂದರೆಗಳನ್ನು ಯಾಕೋಬನ ಮತ್ತವನ ಮಕ್ಕಳನ್ನು ರಕ್ಷಿಸಲು ತಿರುಗಿಸಿದನು.

**ಬುಧವಾರ** **ಜೂನ್ 8**

## ಯೋಸೇಫನು, ಐಗುಪ್ತದಲ್ಲಿ ಓರ್ವ ಗುಲಾಮ

ಪುನಃ ಯೋಸೇಫನ ಚರಿತ್ರೆಯನ್ನು ಮುಂದುವರಿಸುವ, ಯೋಸೇಫನ "ಮೈಗಾವಲಿನವರು ದಳವಾಯಿ"ಯಾಗಿ, ರಾಜನ ಅಧಿಕಾರಿಗಳಾಗಿದ್ದ ಸೆರೆಮನೆಗೆ ಮೇಲ್ವಿಚಾರಕನಲ್ಲಿ ಗುಲಾಮನಾಗಿದ್ದನು" (ಆದಿ 40:3,4; 41:10–12).

ಆದಿಕಾಂಡ 39ನ್ನು ಓದಿರಿ. ಪೋಟೀಫರನ ಮನೆಯಲ್ಲಿ ಮನೆವಾರ್ತೆಯವನಾಗಿದ್ದ ಯೋಸೇಫನ ಕೆಲಸದ ನಿದರ್ಶನದಲ್ಲಿ, ಯಾವ ಅಂಶಗಳು ಆತನ ಯಶಸ್ಸಿಗೆ ಕಾರಣವಾದವು?

ಬಹಳ ಅಲ್ಪಸಮಯದಲ್ಲಿ, ಯೋಸೇಫನು ಯಶಸ್ಸು ಹೊಂದಿದನೆಂದು ತಿಳಿಸಲಾಗಿದೆ (ಆದಿ 39:2,3). ಆತನು ಬಹಳ ಒಳ್ಳೆಯವನು, ಮತ್ತು ಆತನ ದಣಿಯು ಅವನನ್ನು ನೆಚ್ಚಿಕೊಂಡು, "ತನ್ನ ಆಸ್ತಿಯನ್ನೆಲ್ಲಾ ಆತನ ವಶಕ್ಕೆ ಒಪ್ಪಿಸಿದನು", ಮತ್ತು "ತನ್ನ ಮನೆಯ ಮೇಲೆಲ್ಲ ಅಧ್ಯಕ್ಷನಾಗಿ ಇಟ್ಟುಕೊಂಡನು" (ಆದಿ 39:4).

ಯೋಸೇಫನ ಯಶಸ್ಸು ಆತನನ್ನು ಕೆಡಿಸಲಿಲ್ಲ. ಪೋಟಿಫರನ ಹೆಂಡತಿಯು ಅವನನ್ನು ಕಂಡು ಅವನೊಂದಿಗೆ ಕೂಡಲು ಬಯಸಿದಾಗ, ಯೋಸೇಫನು ಸ್ಪಷ್ಟವಾಗಿ ನಿರಾಕರಿಸುವನು. ಮತ್ತು ತನ್ನ ಕೆಲಸ ಕಳೆದುಕೊಳ್ಳಲೂ ತನ್ನ ಸುರಕ್ಷೆ ತ್ಯಜಿಸಲು ಸಿದ್ಧನಿದ್ದು, "ಇಂಥಾ ಮಹಾ ದುಷ್ಕೃತ್ಯವನ್ನು ಮಾಡಿ ದೇವರಿಗೆ ಪಾಪ ಮಾಡಲು" (ಆದಿಕಾಂಡ 39:9) ಹಿಂಜರಿದನು. ಯೋಸೇಫನು ನಿರಾಕರಿಸಿದ್ದರಿಂದ ಅವಮಾನ ಹೊಂದಿ, ಆತನು ತನ್ನನ್ನು ಕೆಡಿಸಲು ಬಂದನೆಂದು, ಆಕೆಯು ಸುಳ್ಳಾದ ಆರೋಪವನ್ನು ಅವನ ಬಗ್ಗೆ ತನ್ನ ಸೇವಕರಿಗೂ ಮತ್ತು ತನ್ನ ಗಂಡನಿಗೂ

ಮಾಡಿದಳು. ಆ ಪರಿಣಾಮ ಯೋಸೇಫನು ಸೆರೆಮನೆಗೆ ಹಾಕಲ್ಪಟ್ಟನು.

ಯೋಸೇಫನು ಇಲ್ಲಿ ಅನುಭವಿಸಿದುದು ನಾವೆಲ್ಲ ಅನುಭವಿಸಿರುವುದೇ: ದೇವರು ಕೈಬಿಟ್ಟಿದ್ದಾನೆಂಬ ಭಾವನೆ. ಆದರೆ ಇಂತಹ ಕಠಿಣ ಸ್ಥಿತಿಯಲ್ಲಿ, "ಕರ್ತನು ಯೋಸೇಫನ ಜೊತೆಯಲ್ಲಿದ್ದನು" (ಆದಿ 39:21).

ಕಾಲಾಂತರದಲ್ಲಿ, ಕರ್ತನು ಕೆಲಸ ಮಾಡಿದನು, ಮತ್ತು ಅದು ಆ ಸೆರೆಮನೆಯ ಮುಖ್ಯಸ್ಥನು ಯೋಸೇಫನೊಂದಿಗೆ ಹೊಂದಿದ್ದ ಸಂಬಂಧದ ಮೇಲೆ ಪರಿಣಾಮ ಮಾಡಿತು. ಇಲ್ಲಿಯೂ ಸಹ, ತನ್ನ ಯಜಮಾನನ ಮನೆಯಲ್ಲಿ ಆದಂತೆ ದೇವರು ಯೋಸೇಫನನ್ನು ಆಶೀರ್ವದಿಸಿದನು. ಆತನು ನಿಜವಾಗಿ ದೇವರ ಅನುಗ್ರಹ ಹೊಂದಿದ್ದನು. (ಆತನು ಇನ್ನೂ ಗುಲಾಮನೇ) ತೀರ ವ್ಯತಿರಿಕ್ತ ಪರಿಸ್ಥಿತಿಯಲ್ಲಿಯೂ, ಉತ್ತಮವಾದದ್ದನ್ನು ಸಾಧಿಸುತ್ತಾನೆ. ಆತನಿಗಿದ್ದ ಸ್ವಾಭಾವಿಕ ಚತುರತೆಯು ಯಾವುದೇ ಆಗಿದ್ದರೂ, ಕೊನೆಗೆ ದೇವರು ಮಾತ್ರ ಆತನಿಗೆ ಯಶಸ್ಸು ಕೊಟ್ಟಿದ್ದು, "ಕರ್ತನು ಅವನ ಸಂಗಡ ಇದ್ದು ಅವನು ನಡೆಸಿದ್ದೆಲ್ಲವನ್ನು ಕೈಗೂಡಿಸಿದ್ದರಿಂದ ಅವನ ವಶದಲ್ಲಿದ್ದ ಯಾವದೊಂದರ ವಿಷಯವಾಗಿಯೂ ಸೆರೆಮನೆಯ ಯಜಮಾನನು ಚಿಂತೆಮಾಡಲಿಲ್ಲ" (ಆದಿ 39:23) ಯಾರ್‍ಯಾರು ಸಹಜ ಸಾಮರ್ಥ್ಯಗಳನ್ನು ಹೊಂದುವರೋ ಮತ್ತು "ಯಶಸ್ಸು ಹೊಂದುವವರು" ಅದು ಎಲ್ಲಿಂದ ಬಂತೆಂದು ನೆನಪಿನಲ್ಲಿಡುವುದು ಎಷ್ಟು ಪ್ರಾಮುಖ್ಯವು.

ಆದಿಕಾಂಡ 39:7–12 ಓದಿರಿ. ಪೊಟಿಫರನ ಹೆಂಡತಿಯು ತಂದ ಒತ್ತಾಯದ ಸನ್ನಿವೇಶಗಳನ್ನು ಯೋಸೇಫನು ಹೇಗೆ ತಡೆದನು? ಆಕೆಯು ಹೇಳಿದ್ದನ್ನು ಮಾಡುವುದು ದೇವರಿಗೆ ಮಾಡುವ ದುಷ್ಕೃತ್ಯ ಎಂದು ಯೋಸೇಫನು ನಿರ್ದಿಷ್ಟವಾಗಿ ಹೇಳಲು ಕಾರಣವೇನು? ಪಾಪದ ಸ್ವರೂಪ ಮತ್ತು ಪಾಪ ಎಂದರೇನು ಎಂಬುದಕ್ಕೆ ಆತನು ತೋರಿಸುವ ತಿಳುವಳಿಕೆ ಏನು?

**ಗುರುವಾರ** **ಜೂನ್ 9**

## ಫರೋಹನ ಕನಸುಗಳು

ಆದಿಕಾಂಡ 40:1–41:36 ಓದಿರಿ. ಫರೋಹನ ಕನಸುಗಳು ಆ ಇಬ್ಬರು ಮುಖ್ಯಸ್ಥರ ಕನಸುಗಳು ಹೇಗೆ ಸಂಬಂಧ ಹೊಂದಿವೆ? ಈ ಸದೃಶ್ಯದ ಮಹತ್ವವೇನು?

ಈ ಘಟನೆಗಳಲ್ಲಿ ದೈವಾಧಿಕಾರದ ಪ್ರಭಾವಗಳು ಮುಂದುವರೆದಿದೆ. ಕೆಲಸಮಯದ ನಂತರ ಇಬ್ಬರು ಫರೋಹನ ಆಸ್ಥಾನದಲ್ಲಿ ಮುಖ್ಯಸ್ಥರು– ಓರ್ವ ಪಾನದಾಯಕ, ಮತ್ತೋರ್ವ ಭಕ್ಷಕಾರ ಸೇರಿದಂತೆ ಇತರ ಅಧಿಕಾರಿಗಳು ಸೆರೆಯಾಗಿದ್ದ ಸೆರೆಮನೆಯ ಮೇಲ್ವಿಚಾರಕನಾಗಿ ಯೋಸೇಫನು ನೇಮಿಸಲ್ಪಟ್ಟನು (ಆದಿ 41:9–11). ಕನಸುಗಳು ಅರ್ಥವಾಗದ ಕಾರಣ ಇಬ್ಬರು ಕಂಗೆಟ್ಟರು ಮತ್ತು ಕನಸುಗಳನ್ನು ಅರ್ಥೈಸಲು ಯಾರು ಇರಲಿಲ್ಲ (ಆದಿ 40:8) ಯೋಸೇಫನು ಆಗ ಅವರವರಿಗೆ ಅವರ ಕನಸ್ಸನ್ನು ಬಿಡಿಸಿ ಹೇಳಿದನು.

ಈ ಎರಡು ಅಧಿಕಾರಿಗಳ ಕನಸುಗಳ ಮಾದರಿಯಲ್ಲಿ, ಫರೋಹನು ಸಹ ಎರಡು ಕನಸುಗಳನ್ನು ಕಂಡನು (ಆದಿ 41:1–8) ಮತ್ತು ಯಾರಿಗೂ ಅದರ ವಿವರಣೆ ಕೊಡಲಾಗಲಿಲ್ಲ. ಅಂತಹ ಸಮಯದಲ್ಲಿ ಆ ಭಕ್ಷಗಾರರ ಮುಖ್ಯಸ್ಥನು ದೈವಾನುಗ್ರಹದಿಂದ ಯೋಸೇಫನನ್ನು ನೆನೆದು ಫರೋಹನಿಗೆ ಸಲಹೆ ಕೊಟ್ಟನು (ಆದಿ 41:9–13).

ಬೇರೆರಡು ಕನಸುಗಳಂತೆ, ಫರೋಹನಿಗೂ ಆ ಮುಖ್ಯಸ್ಥರಂತೆ ಗಾಬರಿಯಾದನು ಮತ್ತು ಯೋಸೇಫನಿಗೆ ವಿವರಿಸಲು ಆತನು ಅವುಗಳ ಅರ್ಥಬಿಡಿಸಿದನು. ಹಾಗೆಯೇ ಅನೇಕ ಹೋಲಿಕೆಯುಳ್ಳ ಫರೋಹನ ಕನಸ್ಸಿನಲ್ಲಿ ಅನೇಕ ಸೂಚಕ ವಿಷಯಗಳನ್ನು ಹೊಂದಿತ್ತು. ಸಂಕೇತಗಳಲ್ಲಿ ಸಾಮ್ಯತೆ ಇದ್ದಿತು; ಏಳು ಆಕಳುಗಳ ಎರಡು ಬಗೆ (ಕೊಬ್ಬಿದವು ಮತ್ತು ಬಡಕಲು) ಮತ್ತು ಎರಡು ಬಗೆಯ ತೆನೆಗಳು (ಪುಷ್ಟಿ ಹಾಗೂ ಬತ್ತಿದ್ದ ಕಾಳುಗಳು) ಎರಡು ರೀತಿಯ ಸಂವತ್ಸರ ಸರಣಿಗಳನ್ನು ಒಂದು ಸುಭಿಕ್ಷೆ, ಇನ್ನೊಂದು ದುರ್ಭಿಕ್ಷೆ ತೋರಿಸುತ್ತಿತ್ತು. ಆ ಏಳು ಆಕಳುಗಳು ಏಳು ತೆನೆಗಳಿಗೆ ಸಾಮ್ಯಹೊಂದಿದ್ದು ಅದೇ ಸಂದೇಶವನ್ನು ಪುನರಾವರ್ತಿಸುತ್ತಿದೆ. ಇವು ದೈವೀಕ ಮೂಲ ಹೊಂದಿವೆ ಎಂದು ಸಾಕ್ಷಿ ಕೊಡುತ್ತದೆ (ಯೋಸೆಫನಿಗೂ ಎರಡು ಕನಸುಗಳಿತ್ತಲ್ಲ) (ಆದಿಕಾಂಡ 41:32; ಮತ್ತು 37:9ನ್ನು ಹೋಲಿಸಿರಿ).

ಫರೋಹನಿಗೆ ಕನಸುಗಳ ಅರ್ಥವನ್ನು ಯೋಸೇಫನು ತಿಳಿಸಿದರೂ ಅದನ್ನು 'ಎಲೋಹಿಮ್' ದೇವರು ರಾಜನಿಗೆ ತಾನೇ ಮುಂದೆ ಮಾಡುವುದನ್ನು ತೋರಿಸಿಕೊಟ್ಟಿರುವುದಾಗಿ ರಾಜನಿಗೆ ತಿಳಿದಿರುವಂತೆ ಸ್ಪಷ್ಟಪಡಿಸಿದನು (ಆದಿ 41:25,28). ಈ ಸಂದೇಶಗಳನ್ನು ಫರೋಹನು ಸಹ ಒಪ್ಪಿದನು ಎಂಬುದನ್ನು

ಅವನನ್ನು ದೇಶದ ಮೇಲೆ ಮುಖ್ಯಸ್ಥನನ್ನಾಗಿ ನೇಮಿಸಬೇಕೆಂದು ಮುಂದೆ ಹೇಳಿದ ಮಾತುಗಳಲ್ಲಿ ತಿಳಿಯಬಹುದು.

"ದೇವರು ಇದನ್ನೆಲ್ಲಾ ನಿನಗೇ ತಿಳಿಸಿರುವುದರಿಂದ ನಿನಗೆ ಸಮಾನವಾದ ಬುದ್ಧಿ ವಿವೇಕಗಳುಳ್ಳ ಪುರುಷನು ಯಾವನೂ ಇಲ್ಲ; ನೀನೇ ಅರಮನೆಯಲ್ಲಿ ಸರ್ವಾಧಿಕಾರಿಯಾಗಿರು" (ಆದಿ 41:39,40).

ಎಷ್ಟು ರೋಚಕವಾಗಿದೆ: ದೇವರಿಗೆ ಕೊಂಡಾಟವಾಗಲಿ, ಯೋಸೇಫನು ಪೋಟಿಫರನ ಮನೆಯ ಮುಖ್ಯಸ್ಥ ಸ್ಥಾನದಿಂದ, ಸೆರೆಮನೆಯ ಮುಖ್ಯಸ್ಥನಾಗಿಯೂ ಅಲ್ಲಿಂದ ಅಖಂಡ ಐಗುಪ್ತದ ಮೇಲೆ ಮುಖ್ಯಸ್ಥನಾಗುತ್ತಾ ಹೋದನು. ಮಹಾದುರಂತಮಯ ಪರಿಸ್ಥಿತಿಗಳು ಹಾಗೆ ತೋರಿಬಂದರೂ, ದೈವಾಧಿಕಾರದ ಕಾರ್ಯಗಳು ಕಂಡುಬರುತ್ತದೆ ಎಂಬುದಕ್ಕೆ ಎಂತಹ ಪ್ರಬಲವಾದ ಚರಿತ್ರೆ.

ದೈವಾನುಗ್ರಹದ ಸೂಚನೆಗಳು ಇಲ್ಲದೇ, ದೇವರೂ ಸಹ ಸುಮ್ಮನಿದ್ದಾನೆ ಎಂದು ಭಾವಿಸಬಹುದಾದ ಘಟನೆಗಳಲ್ಲಿಯೂ ನಾವು ದೇವರ ಮೇಲೆಯೇ ಭರವಸವಿಟ್ಟು ಆತನ ವಾಗ್ದಾನಗಳನ್ನೇ ಆತುಕೊಳ್ಳುವುದಕ್ಕೆ ಹೇಗೆ ಕಲಿತುಕೊಳ್ಳಬಹುದು?

**ಶುಕ್ರವಾರ** **ಜೂನ್ 10**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟ್, "ಐಗುಪ್ತದಲ್ಲಿ ಯೋಸೇಫನು" ಪುಟಗಳು 213–223, "ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್", ಓದಿರಿ.

"ಬಹಳ ಎಳೆಯ ಪ್ರಾಯದಲ್ಲಿ, ಯೌವನಾವಸ್ಥೆಯಿಂದ ಪೌರುಷವಸ್ಥೆಗೆ ಕಾಲಿಡುವ ಕಾಲಗಳಲ್ಲಿ, ಯೋಸೇಫನು ಮತ್ತು ದಾನಿಯೇಲನು ತನ್ನ ಮನೆಯಿಂದ ಬೇರ್ಪಡಿಸಲ್ಪಟ್ಟು ಅನ್ಯದೇಶಗಳಿಗೆ ಸೆರೆಯಾಳುಗಳಾಗಿ ಒಯ್ಯಲ್ಪಟ್ಟನು. ವಿಶೇಷವಾಗಿ ಯೋಸೇಫನು ಶ್ರೇಯಸ್ಸಿನ ಮಹಾಬೆಳವಣಿಗೆಯಿಂದ ಬರುವ ಶೋಧನೆಗಳಿಗೆ ಸಿಲುಕಿದನು. ತನ್ನ ತಂದೆಯ ಮನೆಯಲ್ಲಿ ಸೌಮ್ಯ ಪೋಷಣೆಯ ಬಾಲಕ; ಪೋಟಿಫರನ ಮನೆಯಲ್ಲಿ ಗುಲಾಮ, ನಂತರ ಓರ್ವನಂಬುಗೆಯ ಒಡನಾಡಿ; ಕಾರ್ಯಗಳಲ್ಲಿ ಚತುರನು; ಕಲಿಕೆ, ಗಮನಿಸುವಿಕೆ, ಮತ್ತು ಮನುಷ್ಯರ ಸಂಪರ್ಕದಿಂದ ಹೊಂದಿದ ಶಿಕ್ಷಣ; ಫರೋಹನ ಕಾರಾಗೃಹದಲ್ಲಿ ರಾಜಕೀಯ ಖೈದಿ, ಬಿಡುಗಡೆಯ ಸೂಚನೆಯೂ ಅಥವಾ ಅಪರಾಧ ಖುಲಾಸೆಯ ನಿರೀಕ್ಷೆ ಇಲ್ಲದೆ ಅನ್ಯಾಯವಾಗಿ ದಂಡನೆ

ಹೊಂದಿದವನೂ, ಮಹಾಸಂದಿಗ್ಧ ಕಾಲದಲ್ಲಿ ದೇಶದ ಮುಖ್ಯಸ್ಥನಾಗಿ ನೇಮಿಸಲ್ಪಟ್ಟರೂ– ತನ್ನ ಯಥಾರ್ಥತೆಯನ್ನು ಕಾಪಾಡಿಕೊಳ್ಳಲು ಅವನನ್ನು ಏನು ಬಲಪಡಿಸಿತು?...

"ತನ್ನ ಬಾಲ್ಯದಲ್ಲಿ ದೇವರನ್ನು ಪ್ರೀತಿಸಿ ಆತನಿಗೆ ಭಯಪಡಬೇಕೆಂದು ಯೋಸೇಫನು ಉಪದೇಶ ಹೊಂದಿದ್ದನು, ತನ್ನ ತಂದೆಯ ಗುಡಾರದಲ್ಲಿ ಆಗಾಗ್ಗೆ, ಆ ಸಿರಿಯ ದೇಶದ ನಕ್ಷತ್ರಗಳಡಿ, ಬೇತೇಲಿನ ರಾತ್ರಿ ಕನಸಿನ ವೃತ್ತಾಂತವನ್ನೂ, ಪರಲೋಕದಿಂದ ಭೂಮಿಯ ತನಕ ಇದ್ದ ಆ ನಿಚ್ಚಣಿಗೆ, ಅದರ ಮೇಲೆ ದೇವದೂತರ ಆರೋಹಣ ಅವರೋಹಣ, ಮತ್ತು ಯಾಕೋಬನಿಗೆ ಪರಲೋಕದ ಸಿಂಹಾಸನದ ಮೇಲಿಂದ ತನ್ನನ್ನೇ (ದೇವರು) ಪ್ರಕಟಿಸಿಕೊಂಡಾತನ ವಿಷಯಗಳನ್ನು ಹೇಳಿಕೊಡಲಾಗಿತ್ತು. ಯಬ್ಬೋಕ್ ಹೊಳೆಯ ಬದಿಯಲ್ಲಿ, ತಾನು ಪೋಷಿಸಿದ್ದ ಪಾಪಗಳನ್ನು ತ್ಯಜಿಸಿಬಿಟ್ಟಾಗ, ಯಾಕೋಬನು ಜಯಹೊಂದಿದವನಾಗಿ ನಿಂತದ್ದು ಮತ್ತು ದೇವರೊಂದಿಗೆ (ಗೆದ್ದ) ರಾಜಕುವರನೆಂಬ ಬಿರುದು ಹೊಂದಿದ ಕಥೆಗಳು ಆತನಿಗೆ ತಿಳಿಸಲ್ಪಟ್ಟಿದ್ದವು.

"ಕುರಿಕಾಯುವ ಹುಡುಗನಾಗಿ, ತನ್ನ ತಂದೆಯ ಕುರಿಗಳನ್ನು ಸಲಹುತ್ತಾ ಇದ, ಯೋಸೇಫನ ಶುದ್ಧ ಹಾಗೂ ಸಾಧಾರಣ ಜೀವನವು ದೈಹೀಕ ಹಾಗೂ ಮಾನಸಿಕ ಸಾಮರ್ಥ್ಯಗಳ ಬೆಳವಣಿಗೆಗೆ ಸಹಕಾರಿಯಾಗಿತ್ತು. ಪ್ರಕೃತಿಯ ಮೂಲಕ ದೇವರೊಂದಿಗೆ ಸಂಬಂಧ ಮತ್ತು ತಂದೆಗಳಿಂದ ಮಕ್ಕಳಿಗೆ ಪವಿತ್ರ ಹೊಣೆಯಾಗಿ ಹರಿದುಬಂದು ಮಹಾಸತ್ಯಗಳನ್ನು ಕಲಿಯುವುದರ ಮೂಲಕ ಆತನು ಮನಸ್ಸಿನ ಸಾಮರ್ಥ್ಯ ಹಾಗೂ ನಿಯಮಗಳಿಗೆ ಸ್ಥಿರನಾಗಿರುವುದನ್ನು ಗಳಿಸಿಕೊಂಡಿದ್ದನು.

"ತನ್ನ ಜೀವನದ ಸಂದಿಗ್ಧದಲ್ಲಿ, ಕಾನಾನಿನ ತನ್ನ ಬಾಲ್ಯದ ಮನೆಯಿಂದ ಐಗುಪ್ತದಲ್ಲಿ ಕಾದಿದ್ದ ಆ ಗುಲಾಮತನದೆಡೆಗೆ ಮಾಡುತ್ತಿರುವ ಈ ಘೋರ ಪ್ರಯಾಣದ ಕಾಲದಲ್ಲಿ, ತನ್ನ ಮನೆಯವರ ಗುಡಾರಗಳನ್ನು ಮರೆ ಮಾಡಿದ್ದ ಆ ಬೆಟ್ಟಗಳನ್ನು ಕೊನೆಯ ಬಾರಿ ನೋಡುತ್ತಾ, ಯೊಸೇಫನು ತನ್ನ ತಂದೆಯ ದೇವರನ್ನು ಜ್ಞಾಪಿಸಿಕೊಂಡನು. ತನ್ನ ಬಾಲ್ಯದಲ್ಲಿ ಕಲಿತ ಪಾಠಗಳನ್ನು ಜ್ಞಾಪಿಸಿಕೊಂಡು, ಪರಲೋಕದ ರಾಜನಿಗೇ ಅಧೀನನಾದವನಾಗಿಯೇ ಇರುವಂತೆ ನಿತ್ಯಕ್ಕೂ ವರ್ತಿಸಿ, ತನ್ನ ಬದ್ಧತೆಯನ್ನು ಪ್ರಮಾಣೀಕರಿಸಬೇಕೆಂದು ದೃಢಸಂಕಲ್ಪ ಮಾಡುತ್ತಾ ಆತನ

ಆತ್ಮವು ರೋಮಾಂಚನಗೊಂಡಿತು" ಎಲೆನ್ ಜಿ ವೈಟ್, ಎಡ್ಯುಕೇಶನ್, ಪುಟ 51, 52.

## ಚರ್ಚಿಸಬೇಕಾದ ಪ್ರಶ್ನೆಗಳು

1. ಯೋಸೇಫನನ್ನು ದಾನಿಯೇಲ ಹಾಗೂ ಯೇಸುವಿನೊಂದಿಗೆ ಹೋಲಿಸಿರಿ. ಇರುವ ಸಮಾನ ಅಂಶಗಳೇನು? ಯೋಸೇಫ ಮತ್ತು ದಾನಿಯೇಲನು ತಮ್ಮ ಸ್ವಂತ ರೀತಿಯಲ್ಲಿ ಯೇಸು ಹೇಗಿರಬಹುದೆಂದು ಹೇಗೆ ತೋರಿಸಿಕೊಟ್ಟರು?

2. ಗುರುವಾರದ ಅಂತ್ಯದಲ್ಲಿ ಕೇಳಲಾದ ಪ್ರಶ್ನೆಯ ಕುರಿತು ಚರ್ಚಿಸಿ. ಯೋಸೇಫನಿಗೆ ಅಂತ್ಯದಲ್ಲಿ ಎಲ್ಲವೂ ಒಳ್ಳೆಯದಾಗಿ ಪರಿಣಮಿಸಿದಂತೆ ನಮಗೆ ಆಗದಿದ್ದರೂ, ದೇವರಲ್ಲಿ ಭರವಸವಿಡಲು ಹೇಗೆ ಕಲಿಯಬಹುದು?